( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ದಿಃ27/08/2024**

**ಅಸಲು ದಾವೆ.ನಂ. 299/2019**

ಪಿ.ಡಬ್ಲ್ಯೂ-1

(ಮುಂದುವರೆದ ಪಾಟೀ ಸವಾಲುಃ ಶ್ರೀ.ಎಸ್.ಹೆಚ್.ಆರ್. ವಕೀಲರಿಂದ ಪ್ರತಿವಾದಿಗಳ ಪರವಾಗಿ )

ಮಲ್ಲಿಪಟ್ಟಣ ಗ್ರಾಮದ ಸ.ನಃ50/1ಎ2, ರಲ್ಲಿ 2ಗುಂಟೆ ಜಮೀನು ನಾಗೇಶರವರ ಸ್ವಾಧೀನದಲ್ಲಿ ಇತ್ತು ಎಂದರೆ ಸರಿ. ಸದರಿ 2 ಗುಂಟೆ ಜಮೀನು ಈಗಲೂ ಸದರಿ ನಾಗೇಶವರ ಸ್ವಾಧೀನದಲ್ಲಿಯೇ ಇದೆ. ಸದರಿ 2 ಗುಂಟೆ ಜಮೀನನ್ನು ಅವರು 1ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. 1ನೇ ಪ್ರತಿವಾದಿಯ ತಂದೆಯ ಹೆಸರು ಚನ್ನೇಗೌಡ ಎಂದರೆ ಸರಿ. ಸದರಿ ಎ.ಸಿ. ನಾಗೇಶ್ ರವರಿಗೆ ಇದ್ದ ಸ್ವತ್ತಿನ ವಿಸ್ತೀರ್ಣ ಪೂರ್ವ ಪಶ್ಚಿಮ 100 ಅಡಿ, ದಕ್ಷಿಣೋತ್ತರ 27 ಅಡಿ ಇದ್ದು ಅದರಲ್ಲಿ ಒಂದು ಮನೆ ಇತ್ತು ಎಂದರೆ ಸರಿ. ಸದರಿ ಸ್ವತ್ತಿನ ಪೂರ್ವಕ್ಕೆ ರಸ್ತೆ ಎಂದರೆ ಸರಿ. ಪಶ್ಚಿಮಕ್ಕೆ ಅನ್ವರ್ ಪಾಷರವರ ಮನೆ ಎಂದರೆ ಸಾಕ್ಷಿಯು ಮೊದಲು ಅವರ ಮನೆ ಇತ್ತು, ಈಗ ಖಾಲಿ ಜಾಗ ಎಂದು ನುಡಿಯುತ್ತಾರೆ. ದಕ್ಷಿಣಕ್ಕೆ ರತ್ನಮ್ಮನವರ ಮನೆ ಎಂದರೆ ಸರಿ. ಉತ್ತರಕ್ಕೆ ಮಲ್ಲಪ್ಪಮನವರ ಮನೆ ಎಂದರೆ ಸರಿ. ಸದರಿ ಮಲ್ಲಪ್ಪ ಎಂದರೆ ನನ್ನ ತಂದೆ. ಸದರಿ ನನ್ನ ತಂದೆಯ ಮನೆ ಸ.ನಃ62ರಲ್ಲಿ ಬರುತ್ತದೆ. ಸದರಿ ಸ.ನಂಃ 62ರ ಜಾಗ ಸರ್ಕಾರಿ ಜಾಗ. ಸದರಿ ಜಾಗವು ನನ್ನ ತಂದೆಗೆ 2017ರಲ್ಲಿ ಮಂಜೂರು ಆಗಿರುತ್ತದೆ. ಅದಕ್ಕೆ ಸಂಬಂಧಪಟ್ಟ ದಾಖಲೆ ಇರುತ್ತದೆ.

ಸದರಿ ಮಲ್ಲಪ್ಪನವರ ಮನೆಯ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಸ.ನಂಃ 59ರ ಖಾಲಿ ಜಾಗ, ಉತ್ತರಕ್ಕೆ ಸ.ನಂಃ59 ರ ಖಾಲಿ ಜಾಗ, ಸದರಿ ಮಲ್ಲಪ್ಪನವರ ಮನೆಯಿಂದ ಪಶ್ಚಿಮಕ್ಕೆ ನಮ್ಮ ಮನೆ ಇರುತ್ತದೆ. ಸದರಿ ಮಲ್ಲಪ್ಪನವರ ಮನೆ ಹಾಗೂ ನನ್ನ ಮನೆ ಸ.ನಂಃ 56ರಲ್ಲಿ ಬರುತ್ತದೆ ಎಂದರೆ ಸಾಕ್ಷಿಯು ಮಲ್ಲಪ್ಪನವರ ಮನೆ ಸ.ನಂಃ 62ರಲ್ಲಿ ಹಾಗೂ ನನ್ನ ಮನೆ ಸ.ನಂಃ 59/1ಎ1ರಲ್ಲಿ ಇದೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಒಂದು ಭಾವ ಚಿತ್ರವನ್ನು ತೋರಿಸಲಾಗಿ, ಅದರಲ್ಲಿ ಕಾಣಿಸುತ್ತಿರುವ 3 ಕಟ್ಟಡಗಳ ಪೈಕಿ ನಡುವಿನಲ್ಲಿರುವ ಕಟ್ಟಡವನ್ನು ನಾಗೇಶ್ ರವರಿಗೆ ಸೇರಿರುವುದು ಎಂಬುದಾಗಿಯು, ಅದರ ಎಡಬದಿಯಲ್ಲಿರುವ ಕಟ್ಟಡವನ್ನು ಮಲ್ಲಪ್ಪನವರಿಗೆ ಸೇರಿದ್ದು, ಎಂಬುದಾಗಿಯು ಸಾಕ್ಷಿಯ ಸದರಿ ಭಾವಚಿತ್ರವನ್ನು ನೋಡಿ ನುಡಿಯುತ್ತಿದ್ದಾರೆ. ಅದನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಹಾಗೂ ನಿಶಾನೆಗೊಳಿಸಬೇಕು ಎಂದು ಕೇಳಿದ ಮೇರೆಗೆ ಅದನ್ನು ನಿಡಿ–2 ಎಂದು ಗುರುತಿಸಲಾಯಿತು. ನಿಡಿ–2ರಲ್ಲಿರುವ ನಾಗೇಶ್ ರವರಿಗೆ ಸಂಬಂಧಪಟ್ಟ ಕಟ್ಟಡ ಎನ್ನುವುದನ್ನು ನಿಡಿ–2(ಎ), ಮಲ್ಲಪ್ಪನವರಿಗೆ ಸೇರಿದ ಕಟ್ಟಡ ಎನ್ನುವುದನ್ನು ನಿಡಿ–2(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಗೆ ಇನ್ನೊಂದು ಭಾವಚಿತ್ರವನ್ನು ತೋರಿಸಿ ಅದು ನಿಶಾನೆ-2ರಲ್ಲಿರುವ ಮಲ್ಲಪ್ಪನವರ ಮನೆಯ ಹಿಂಭಾಗದ ಭಾವಚಿತ್ರ ಎಂದರೆ ಸಾಕ್ಷಿಯು ಸದರಿ ಭಾವಚಿತ್ರವನ್ನು ನೋಡಿ ಹೌದು ಎಂದು ನುಡಿಯುತ್ತಾರೆ. ಸದರಿ ಭಾವಚಿತ್ರದಲ್ಲಿ ಕಾಣಿಸುತ್ತಿರುವ ಮಂಗಳೂರು ಹೆಂಚಿನ ಮನೆ ನನ್ನ ತಂದೆಯಾದ ಮಲ್ಲಪ್ಪನವರ ಮನೆ ಎಂದು ಸಾಕಕ್ಷಿಯ ಸದರಿ ಭಾವಚಿತ್ರವನ್ನು ನೋಡಿ ನುಡಿಯುತ್ತಿದ್ದಾರೆ. ಅದನ್ನು ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಹಾಗೂ ನಿಶಾನೆಗೊಳಿಸಬೇಕು ಎಂದು ಕೇಳಿದ ಮೇರೆಗೆ ಅದನ್ನು ನಿಡಿ-3 ಎಂದು ಗುರುತಿಸಲಾಯಿತು. ನಿಡಿ-3ರಲ್ಲಿ ಕಾಣಿಸುತ್ತಿರುವ ಬಿಳಿ ಬಣ್ಣದ paint ಆರ್.ಸಿ.ಸಿ. ಮನೆಯೇ ವ್ಯಾಜ್ಯ ಇರುವ ಮನೆ ಎಂದರೆ ಸಾಕ್ಷಿಯ ಅದನ್ನು ನೋಡಿ ಹೌದು ಎಂದು ನುಡಿಯುತ್ತಾರೆ. ಸದರಿ ಮನೆಯನ್ನು ನಿಡಿ-3(ಎ) ಎಂದು ಗುರುತಿಸಲಾಯಿತು.

ನಿಡಿ-2ರಲ್ಲಿ ನಿಡಿ-2(ಎ)ಮತ್ತು ನಿಡಿ-2(ಬಿ)ಯ ಮುಂಭಾಗ ಕಾಣಿಸುತ್ತಿರುವ ರಸ್ತೆ ಮಲ್ಲಿಪಟ್ಟಣ ಮತ್ತು ಶನಿವಾರಸಂತೆ ರಸ್ತೆ ಎಂದರೆ ಸರಿ. ಸದರಿ ರಸ್ತೆ ಉತ್ತರ-ದಕ್ಷಿಣವಾಗಿ ಹಾದು ಹೋಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ರಸ್ತೆ ಸದರಿ ಎರಡು ಮನೆಗಳ ಪೂರ್ವಕ್ಕೆ ಬರುತ್ತದೆ ಎಂದರೆ ಸರಿ. ನಿಡಿ-3(ಎ)ರಲ್ಲಿ ರುವ ಮಲ್ಲಪ್ಪನವರ ಮನೆಯ ಪಶ್ಚಿಮ ದಿಕ್ಕಿಗೆ ವ್ಯಾಜ್ಯ ಇರುವ ಮನೆ ಇದೆ ಎಂದರೆ ಸರಿ. ನಿಡಿ-3ರಲ್ಲಿ ನೀಲಿ ಹಸಿರು ಮಿಶ್ರಿತ ಬಣ್ಣ ಇರುವ ಕಟ್ಟಡ 2ನೇ ಪ್ರತಿವಾದಿಗೆ ಸೇರಿದು ಎಂದರೆ ಸಾಕ್ಷಿಯು ಅದು ನಾಗೇಶ್ ರವರಿಗೆ ಸೇರಿದ್ದು ಎಂದು ನುಡಿಯುತ್ತಾರೆ. ಸದರಿ ನಿಡಿ-3ರಲ್ಲಿರುವ ಮಲ್ಲಪ್ಪನವರ ಮನೆಗೂ ಹಾಗೂ ವ್ಯಾಜ್ಯ ಇರುವ ಮನೆಯ ಮಧ್ಯೆ ಒಂದು ಕಾಂಪೌಡ್ ಇದೆ ಎಂದರೆ ಸರಿ. ಸದರಿ ಕಾಂಪೌಂಡ್ ಪೂರ್ವ ಪಶ್ಚಿಮವಾಗಿ ಇದೆ ಎಂದರೆ ಸರಿ. ಸದರಿ ಕಾಂಪೌಂಡ್ 2ನೇ ಪ್ರತಿವಾದಿ ಹಾಕಿರುವುದು ಎಂದರೆ ಸರಿಯಲ್ಲ. ಸಾಕ್ಷಿಯು ಅದನ್ನು ನಾವೇ ಹಾಕಿರುವುದು ಎಂದು ನುಡಿಯುತ್ತಾರೆ. ಸದರಿ ಕಾಂಪೌಂಡ್ ನಿಂದ ನಾವು ನಿರ್ಮಿಸುತ್ತಿರುತ್ತೇವೆ ಎನ್ನಲಾದ ಮನೆಗೆ ಸುಮಾರರು ಅರ್ಧ ಅಡಿ ಅಂತರವಿರುತ್ತದೆ.

ನಾಗೇಶ್ ರವರ ಮನೆ ಸ.ನಂಃ59/1ಎ2ರಲ್ಲಿರುತ್ತದೆ. ಸದರಿ ಸ.ನಂಬರ್ ನಲ್ಲಿ ಇದ್ದ ಜಾಗ ಮತ್ತು ಮನೆಯನ್ನು 1ನೇ ಪ್ರತಿವಾದಿ ಖರೀದಿಸಿ, ನಂತರ ಅವರು 2ನೇ ಪ್ರತಿವಾದಿಗೆ ದಾನ ಮಾಡಿರುತ್ತಾರೆ ಎಂದರೆ ಸರಿಯಲ್ಲ. 2ನೇ ಪ್ರತಿವಾದಿ ವಾಸವಿದ್ದ ಸಮಯದಲ್ಲಿ ಅಲ್ಲಿ ಮಂಗಳೂರು ಹೆಂಚಿನ ಮನೆ ಇತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಸದರಿ ಮಂಗಳೂರು ಹೆಂಚಿನ ಮನೆಯನ್ನು ಕೆಡವಿ ಆರ್.ಸಿ.ಸಿ. ಮನೆಯನ್ನು ನಿರ್ಮಿಸಲಾಗಿದೆ ಎಂದರೆ ಸಾಕ್ಷಿಯ ಸುಳ್ಳು ಎಂದು ನುಡಿದು, ಮುಂದುವರೆದು ನಾನು ನೋಡಿದಾಗಿನಿಂದಲೂ ಅಲ್ಲಿ ಆರ್.ಸಿ.ಸಿ. ಮನೆಯೇ ಇದೆ ಎಂದು ನುಡಿಯುತ್ತಾರೆ.

ನಾನು ನಿರ್ಮಿಸಿರುತ್ತೇನೆ ಎನ್ನಲಾದ ಸಮಯಪೂರ್ವಕ್ಕೆ ಮಲ್ಲಪ್ಪನವರ ಜಾಗ ಎಂದರೆ ಸಾಕ್ಷಿಯು ಮಲ್ಲಪರ ಮನೆ ಎಂದು ನುಡಿಯುತ್ತಾರೆ. ಪಶ್ಚಿಮಕ್ಕೆ ಖಾಲಿ ಜಾಗ ಎಂದರೆ ಸರಿ. ಅದು ಮಲ್ಲಿಪಟ್ಟಣ ಸಂತೆ ಮಾಳ ಎಂದರೆ ಸರಿ. ಉತ್ತರಕ್ಕೆ ಖಾಲಿ ಜಾಗ ಎಂದರೆ ಸರಿಯಲ್ಲ. ಶನಿವಾರಸಂತೆ ಅರಕಲಗೂಡು ರಸ್ತೆ

ಇರುತ್ತದೆ. ದಕ್ಷಿಣಕ್ಕೆ ಕಾಂಪೌಂಡ್ ಹಾಗೂ 2ನೇ ಪ್ರತಿವಾದಿಯ ಮನೆ ಎಂದರೆ ಸರಿ. ನಾನು ನಿರ್ಮಿಸಿರುತ್ತೇನೆ ಎನ್ನಲಾದ ಮನೆಯ ವಿಸ್ತೀರ್ಣ 40x15 ಅಡಿ. ನಾನು ನಿರ್ಮಿಸಿರುವ ಮನೆಯ ಉತ್ತರಕ್ಕೆ ಸಂತೆಮಾಳ ಜಾಗ ಎಂದರೆ ಸರಿಯಲ್ಲ. ಸಾಕ್ಷಿಯು ಅದು ಸರ್ಕಾರಿ ಜಾಗ ಎಂದು ನುಡಿಯುತ್ತಾರೆ. ಸದರಿ ಮನೆಯ ಉತ್ತರಕ್ಕೆ ರಸ್ತೆ ಇರುವುದಿಲ್ಲ.

ನಮ್ಮ ಮನೆಯಲ್ಲಿ ನಾನು, ನನ್ನ ಪತ್ನಿ ಹಾಗೂ ನನ್ನ ಮಗ ಇದ್ದೇವೆ. ನನಗೆ ಈಗ ಅಂದಾಜು 48 ವರ್ಷ ಆಗಿರಬಹುದು. ವ್ಯಾಜ್ಯ ಇರುವ ಮನೆಯನ್ನು ಮಂಜೂರು ಮಾಡಿ ಎಂದು ನಾನು 2012-13ರಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತೇನೆ. ನನ್ನ ತಂದೆಯಾದ ಮಲ್ಲಪ್ಪನವರು ಹಲವಾರು ಬಾರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. 2017ರಲ್ಲಿ ಅಕ್ರಮ-ಸಕ್ರಮ ಯೋಜನೆಯಡಿಯಲ್ಲಿ ಮಂಜೂರು ಆಗಿರುತ್ತದೆ. ಸದರಿ ನಾಗೇಶ್ ರವರು ಮಲ್ಲಿಪಟ್ಟಣದವರು ಎಂದರೆ ಸರಿ.ಅವರು ಈಗ ಎಲ್ಲಿ ಇದ್ದಾರೆ ಎಂದು ನನಗೆ ನಿಖರವಾಗಿ ಗೊತ್ತಿಲ್ಲ.

ನನಗೆ ತೊಂದರೆ ನೀಡಿರುವುದರಿಂದ ನಾನು ಈ ದಾವೆಯನ್ನು ಹಾಕಿರುತ್ತೇನೆ. ನನ್ನ ಕೊಟ್ಟಿಗೆಯನ್ನು ಕಿತ್ತು ಹಾಕಿ ತೊಂದರೆ ನೀಡಿರುತ್ತಾರೆ. ನಾನು ಸ.ನಂಃ59ರಲ್ಲಿ ಮನೆ ನಿರ್ಮಿಸಿಲ್ಲ ಹಾಗೂ ನಾನು ನಿರ್ಮಿಸಿರುವ ಮನೆ ಸ.ನಂಃ56ರಲ್ಲಿ ಇದೆ ಎಂದರೆ ಸರಿಯಲ್ಲ. ನೀವು ನಿರ್ಮಿಸಿರುವ ಮನೆ ಸ.ನಂಃ56ರಲ್ಲಿ ಇದ್ದು, ಅದನ್ನು ಖಚಿತ ಪಡಿಸಲು ಅಳತೆ ಮಾಡಿಸಲು ಏನಾದರೂ ತಕರಾರು ಇದೆಯೇ ಎಂದರೆ ಸಾಕ್ಷಿಯ ಹೌದು ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯದಲ್ಲಿ ಸುಳ್ಳು ದಾವೆಯನ್ನು ಹಾಕಿ ಸುಳ್ಳು ಹಕ್ಕು ಪತ್ರವನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಿರ್ಮಿಸಿರುವ ಮನೆ ಸ.ನಂಃ 59ರಲ್ಲಿ ಇಲ್ಲ ಎಂದರೆ ಸರಿಯಲ್ಲ.

( ಮರು ವಿಚಾರಣೆ ಇಲ್ಲ. )

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು )

ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ,ಅರಕಲಗೂಡು.